ಕರ್ನಾಟಕ ವಿಶ್ವವಿದ್ಯಾಲಯ Ph:0836-2215285

**Karnatak University**

University with Potential for Excellence

NAAC Accredited with "A" Grade-2014

ಪ್ರಸಾರಾಂಗ ವಿಭಾಗ ಪಾವಟೆ ನಗರ, ಧಾರವಾಡ

**Publication Dept** Pavate Nagar, **Dharwad**- Karnataka-India 580 003

---

ಕವಿವಿ: ಪ್ರಸಾರಾಂಗ :2020–21/72 : **ಸುತ್ತೋಲೆ** : ದಿನಾಂಕ : 11–01–2021

ಅ) ಕ.ವಿ.ವಿ. ನಿಯತಕಾಲಿಕೆಗೆ ಲೇಖನ ಕಳಿಸುವ ಕುರಿತು:

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗ, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಅಧ್ಯಾಪಕರ/ವಿದ್ಯಾರ್ಥಿಗಳ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ನಿಯತಕಾಲಿಕೆಗಳಿಗೆ ಸಂಶೋಧನಾತ್ಮಕ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ನಿರ್ದೇಶಕರು ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580 003 ಇವರಿಗೆ ಕಳಿಸಲು ಕೋರಲಾಗಿದೆ.

| | | |
|---|---|---|
| 1 | ಕರ್ನಾಟಕ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ | ಸಂಶೋಧನಾತ್ಮಕ ಲೇಖನ/ಪುಸ್ತಕ ವಿಮರ್ಶೆ |
| 2 | ವಿದ್ಯಾರ್ಥಿ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ | ಲೇಖನ/ಕತೆ/ಕವಿತೆ ವಿದ್ಯಾರ್ಥಿಗಳಿಗೆ ಮಾತ್ರ |
| 3 | ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಜ್ – ವಾರ್ಷಿಕ ಸಂಚಿಕೆ | ಇಂಗ್ಲೀಷ್/ಹಿಂದಿ/ಮರಾಠಿ/ಸಂಸ್ಕೃತ/ಉರ್ದು/ ಇತರೆ ಭಾಷೆಗಳ ಸಂಶೋಧನಾತ್ಮಕ ಲೇಖನ |
| 4 | ಕೆ.ಯು.ಜರ್ನಲ್ ಆಫ್ ಸೋಶಿಯಲ್ ಸಾಯನ್ಸ್ – ವಾರ್ಷಿಕ ಸಂಚಿಕೆ | ಈ ವಿಷಯಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿರಬೇಕು |
| 5 | ಕೆ.ಯು.ಜರ್ನಲ್ ಆಫ್ ಸಾಯನ್ಸ್ – ವಾರ್ಷಿಕ ಸಂಚಿಕೆ | ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿರಬೇಕು |

**2020–21**ನೇ ಸಾಲಿನ ಮೇಲಿನ ನಿಯತಕಾಲಿಕೆಗಳಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಲೇಖನಗಳನ್ನು **6** ರಿಂದ **10** ಪುಟಗಳ ಮಿತಿಯಲ್ಲಿ ಸಿದ್ದಪಡಿಸಿ, ದಿನಾಂಕ **11** ಫೆಬ್ರುವರಿ **2021** ರ ಒಳಗಾಗಿ ಪ್ರಸಾರಾಂಗಕ್ಕೆ ತಲುಪುವಂತೆ ಕಳಿಸುವುದು.

- ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಜ್ ನಿಯತಕಾಲಿಕೆ ಲೇಖನ **A/4 Size** ನಲ್ಲಿ ಸಿದ್ಧಪಡಿಸಿ ಸಿ.ಡಿ. ಹಾಗೂ ಹಾರ್ಡ ಪ್ರತಿಯಲ್ಲಿ ಲೇಖನ ಕಳಿಸುವುದು.
- ಸೋಶಿಯಲ್ ಸಾಯನ್ಸ್ ನಿಯತಕಾಲಿಕೆಗಳ ಲೇಖನಗಳನ್ನು **Box Formet** ನಲ್ಲಿ ಸಿದ್ಧಪಡಿಸಿ **Notes for Contributors** ಸೂಚಿಯ ಅನುಸಾರ ಲೇಖಕರು ಲೇಖನಗಳ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಿಕೊಡುವುದು.
- ಕರ್ನಾಟಕ ಭಾರತಿ, ವಿದ್ಯಾರ್ಥಿ ಭಾರತಿ ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ತಮ್ಮ ಲೇಖನವನ್ನು ನುಡಿಲಿಪಿ (ಪೇಜ್‌ಮೇಕರ್–ಬುಕ್ ಫಾರ್ಮೆಟ್‌ಗೆ) ಸಿದ್ದಪಡಿಸಿ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಬೇಕು.
- ಸದರಿ ನಿಯತಕಾಲಿಕೆಗಳು **ISSN & Refereed Journal** ಆಗಿರುವುದರಿಂದ ಲೇಖನಗಳನ್ನು ವಿಷಯ ಸಂಬಂಧಿಸಿದ ಪರಿಣಿತರಿಂದ ಪರಿಶೀಲಿಸಿ ಪ್ರಕಟಣೆಗೆ ಯೋಗ್ಯವಾದವುಗಳನ್ನು ಮಾತ್ರ ಪ್ರಕಟಿಸಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಆ ಬಗ್ಗೆ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
- ಲೇಖನ ಪರಿಶೀಲನಾಕಾರರ ಹೆಸರು ಹಾಗೂ ವರದಿಯನ್ನು ಗೌಪ್ಯವಾಗಿಡಲಾಗುವುದು.

ಅ) ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳಲ್ಲಿ ಅಧ್ಯಾಪಕರು ಪಾಲ್ಗೊಳ್ಳುವ ಬಗ್ಗೆ:

ಪ್ರತಿವರ್ಷದಂತೆ **2020–21**ನೇ ಸಾಲಿನಲ್ಲಿ ಪ್ರಸಾರಾಂಗವು ಗ್ರಾಮಾಂತರ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಉಪಯುಕ್ತವೆನಿಸುವ ವಿಷಯಗಳ ಬಗ್ಗೆ ಉಪನ್ಯಾಸ ನೀಡಬಯಸುವ ಅಧ್ಯಾಪಕರು ತಮ್ಮ ವಿಷಯ ಹಾಗೂ ವಿಳಾಸದೊಂದಿಗೆ ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ.ಧಾರವಾಡ–3 ಇವರಿಗೆ ದಿನಾಂಕ **11** ಫೆಬ್ರುವರಿ **2021** ರ ಒಳಗಾಗಿ ತಮ್ಮ ಅರ್ಜಿ ಸಲ್ಲಿಸಲು ಕೋರಲಾಗಿದೆ. ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳನ್ನು ಇಟ್ಟುಕೊಳ್ಳಲು ಬಯಸುವ ಸಂಘ, ಸಂಸ್ಥೆ, ಮಹಾವಿದ್ಯಾಲಯದವರು ಮೇಲಣ ವಿಳಾಸಕ್ಕೆ ಪತ್ರ ಬರೆಯಬಹುದು.

ಮೇಲಿನ ವಿಷಯವನ್ನು ವಿಭಾಗಗಳ/ಮಹಾವಿದ್ಯಾಲಯದ ಅಧ್ಯಾಪಕರು/ವಿದ್ಯಾರ್ಥಿಗಳ ಗಮನಕ್ಕೆ ತರಲು ವಿನಂತಿಸಲಾಗಿದೆ.

**Sd/-**

ನಿರ್ದೇಶಕರು

ಪ್ರಸಾರಾಂಗ

ಪ್ರತಿ: 1) ಮುಖ್ಯಸ್ಥರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

2) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲ ಅಧೀನ/ಸಂಲಗ್ನ ಮಹಾವಿದ್ಯಾಲಯಗಳು